# ಮಾದರಿ ಪ್ರಶ್ನೆಪತ್ರಿಕೆ 6

## ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ

## ಗರಿಷ್ಠ ಅಂಕ: ೧೦೦ ಅವಧಿ : ೩ ಗಂಟೆಗಳು

### ಭಾಗ -'ಎ'

ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧

೧. ಶಬರಿ ಸೀತೆಗೆ ಹೇಗೆ ರಕ್ಷೆ ನೀಡಲಿ ಎಂದು ರಾಮನು ಹೇಳುವನು ?

೨. ಗೊರೂರರನ್ನು ನೋಡಿ ವಿದ್ಯಾರ್ಥಿಗಳು ಭಯ ಪಡಲು ಕಾರಣವಾದ ಅಂಶ ಯಾವುದು ?

೩.ನಾಡ ಭವ್ಯಜನರು ಯಾರ ಬಳಿ ಬಂದು ಬಿನ್ನಹ ಮಾಡಿದರು ?

೪.ಶಾನುಭೋಗರಿಗೆ ತಲೆಸುತ್ತಿ ಬರಲು ಕಾರಣವೇನು ?

೫.ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

೬.ಹಕ್ಕಿಯು ಯಾವುದರ ಸಂಕೇತವಾಗಿದೆ ?

೭.ಘಟಸಂಭೂತ ಯಾರು ?

೮.ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?

೯.ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ ?

೧೦. ಇಂಗ್ಲೆಂಡ್ ಗೆ ಹೋಗುವವರೆಗೆ ಅಕ್ಷರದ ಕುರಿತು ಗಾಂಧೀಜಿ ಯಾವ ಭಾವನೆ ಹೊಂದಿದ್ದರು ?

೧೧. ಪಾರಿವಾಳಗಳ ಪುಟ್ಟ ಮರಿಗಳು ಚೀತ್ಕರಿಸಲು ಕಾರಣವೇನು ?

ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮

೧೨.ಶಾಸನದಲ್ಲಿ ವಿವರಿಸಿರುವ ರಾಮಾನುಜಾಚಾರ್ಯರ ಗುಣ ವಿಶೇಷತೆ ತಿಳಿಸಿ.

೧೩.ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆ ನೀಡಿದನು ?

೧೪.ವೃಕ್ಷವು ಸಾಕ್ಷಿನುಡಿದಾಗ ಧರ್ಮಬುದ್ಧಿಯ ಮನದಲ್ಲಿ ಮೂಡಿದ ಆಲೋಚನೆ ಯಾವುದು ?

೧೫.ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಆಲೋಚಿಸಿದರು ?

೧೬.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ ?

೧೭.ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?

೧೮.ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿ ಕವಿ ಹೇಗೆ ವರ್ಣಿಸಿದ್ದಾರೆ ?

mamatabhagwat1@gmail.com

೧೯.ವಿಶ್ವಧರ್ಮ ಯಾವಾಗ ರೂಪಿತವಾಗುವುದು ?

೨೦.ಒಗಟುಗಳಿಂದ ಶೈಕ್ಷಣಿಕವಾಗಿ ಹೇಗೆ ಪ್ರಯೋಜನವಾಗುವುದು ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨**

೨೧. ''ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ''

೨೨. ''ಈ ಸಮಷ್ಟಿಮನಸ್ಸಲ್ಲಿ ಎಲ್ಲರೂ ಇರುತ್ತಾರೆ .''

೨೩. ''ಜೀವ ಸತ್ತು ಹೋಗುವುದು ಗೊತ್ತ ''

೨೪.'' ಗೆರೆ ಎಳೆದು ಗಡಿ ಎಂದ''

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

೨೫. ಪು.ತಿ.ನ.

೨೬. ಪಂಪ

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ನಿಷ್ಠೆ---------- -

---------------

-------------------

-------ರಾಮನಾಥ

ಅಥವಾ

ನುಡಿದರೆ --------------------- -

-----------------------------------------

---------------------------------------

-----------------------------

------------------------- ನೆಂತೊಲಿವನಯ್ಯ ?

**೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪.**

ಉರ್ವಿಯೊಳ್ ಕೌಸಲ್ಯೆಪಡೆದ ಕುವರಂರಾಮ

ನೋರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು.

ಪ್ರಶ್ನೆಗಳು :

೧.ಯಜ್ಞತುರಗದ ಹಣೆಯ ಮೇಲಿದ್ದ ವಾಕ್ಯದ ಅರ್ಥ ತಿಳಿಸಿ.

೨.ಲವನು ಉರಿದೇಳಲು ಕಾರಣವೇನು ?

೩.ರಾಮನ ಗರ್ವವನ್ನು ಬಿಡಿಸಬೇಕೆಂದು ಲವನು ನಿರ್ಧರಿಸಲು ಕಾರಣವೇನು ?

೪.ಈ ನುಡಿಯಲ್ಲಿ ಯಾವ ಅಂಶ ನಿಮಗೆ ಇಷ್ಟವಾಯಿತು ಏಕೆ ?

## ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯. ಜೀವನದೃಷ್ಟಿ ಗದ್ಯದಲ್ಲಿ ಅಂತರ್ ಜೀವಿಯ ವ್ಯಕ್ತಿತ್ವ ಹೇಗೆ ವರ್ಣಿತವಾಗಿದೆ ?

ಅಥವಾ

ಸಮಾಜದಲ್ಲಿ ಕಲೋಪಾಸಕನ ಮಹತ್ವವನ್ನು ವಿ.ಕೃ.ಗೋಕಾಕ್ ಹೇಗೆ ವಿಶ್ಲೇಷಿಸಿದ್ದಾರೆ ?

೩೦.ಕೌರವೇಂದ್ರನ ಕೊಂದೆ ನೀನು ಪದ್ಯಭಾಗದಲ್ಲಿ ವ್ಯಕ್ತವಾಗಿರುವ ದುರ್ಯೋಧನನ ಕುರಿತಾದ ಕರ್ಣನ ಅಭಿಮಾನವನ್ನು ವಿವರಿಸಿ.

ಅಥವಾ

ಕರ್ಣನಿಂದ ಪಾಂಡವರನ್ನು ರಕ್ಷಿಸಲು ಕೃಷ್ಣನು ಮಾಡಿದ ತಂತ್ರವನ್ನು ವಿವರಿಸಿ

## ೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ವಿಶ್ವೇಶ್ವರಯ್ಯ ಅವರು ಮೂರು ವರ್ಷಗಳ ಕಾಲಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದರು .ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ಯೋಜನೆ ಪ್ರಾರಂಭ ,ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ ,ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ, ಮಾರಿ ಕಣಿವೆ ಜಲಾಶಯದ ನೀರು ಹಂಚಿಕೆ ಪುನರ್ವವಸ್ಥೆಸಣ್ಣ ನೀರಾವರಿ ವ್ಯವಸ್ಥೆಗೆ ಮರುಜೀವ ,ಇವೆಲ್ಲ ಅವರ ಅಭಿವೃದ್ಧಿ ಕಾರ್ಯಗಳ ಕುರುಹುಗಳು.ಇವುಗಳಿಗೂ ಮಿಗಿಲಾಗಿ ಇಲಾಖೆಯಲ್ಲಿ ಕ್ರಮಬದ್ಧ ಕಾರ್ಯನೀತಿ ,ಸಂಸ್ಥಾನದಲ್ಲಿ ಶಿಸ್ತಿನ ಆಡಳಿತ

,ಜನರಿಗೆ ಆಧುನಿಕ ಜೀವನ ವ್ಯವಸ್ಥೆಗೆ ಪೂರ್ವಸಿದ್ಧತೆ ಹೇಗಿರಬೇಕೆಂಬ ತಿಳುವಳಿಕೆ ನೀಡಿದ್ದು,ಇವು ಇವರು ಉಂಟು ಮಾಡಿದ ಆಡಳಿತ ಮತ್ತು ನೈತಿಕ ಪ್ರಭಾವಗಳು.

ಪ್ರಶ್ನೆಗಳು

೧.ವಿಶ್ವೇಶ್ವರಯ್ಯನವರು ಉಂಟು ಮಾಡಿದ ಆಡಳಿತ ಮತ್ತು ನೈತಿಕ ಪ್ರಭಾವಗಳು ಯಾವುವು ?

೨.ವಿಶ್ವೇಶ್ವರಯ್ಯನವರ ಅಭಿವೃದ್ಧಿ ಕಾರ್ಯಗಳ ಕುರುಹುಗಳು ಯಾವುವು ?

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. ೧೦*೧=೧೦**

೩೨. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳ ಸಂಖ್ಯೆ-------

ಎ) ೨೫ ಬಿ)೧೦ ಸಿ)೯ ಡಿ)೩೪

೩೩. 'ದಿನದಿನ' ಪದದ ವ್ಯಾಕರಣ ವಿಶೇಷವಿದು ------

ಎ)ದ್ವಿರುಕ್ತಿ ಬಿ)ಅನುಕರಣಾವ್ಯಯ ಸಿ)ಜೋಡುನುಡಿ ಡಿ)ನುಡಿಗಟ್ಟು

೩೪. 'ಹೊಸಗಾಲ' ಪದವು ಈ ಸಂಧಿಗೆ ಉದಾಹರಣೆಯಾಗಿದೆ......

ಎ) ಗುಣಸಂಧಿ ಬಿ)ಲೋಪಸಂಧಿ ಸಿ)ಆದೇಶ ಸಂಧಿ ಡಿ)ಜಶ್ತ್ವಸಂಧಿ

೩೫. 'ಇನತನೂಜ' ಪದವು ಈ ಸಮಾಸದ ಉದಾಹರಣೆಯಾಗಿದೆ .

ಎ) ಬಹುವ್ರೀಹಿಸಮಾಸ ಬಿ)ಕ್ರಿಯಾಸಮಾಸ ಸಿ) ಗಮಕ ಸಮಾಸ ಡಿ)ಕರ್ಮಧಾರಯ ಸಮಾಸ

೩೬. 'ಓಟ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ----

ಎ) ಕೃದಂತ ನಾಮ ಬಿ)ಕೃದಂತಾವ್ಯಯ ಸಿ)ಕೃದಂತಭಾವನಾಮ ಡಿ)ತದ್ಧಿತಾಂತ ನಾಮ

೩೭. 'ವಿದ್ಯಾರ್ಥಿ' ಪದವು ಈ ನಾಮಪದಕ್ಕೆ ಉದಾಹರಣೆಯಾಗಿದೆ -----

ಎ) ರೂಢನಾಮ ಬಿ)ಅಂಕಿತನಾಮ ಸಿ)ಸರ್ವನಾಮ ಡಿ)ಅನ್ವರ್ಥಕ ನಾಮ

೩೮. 'ನಾನು ಕೈಯಿಂದ ಮಾಡಿದ್ದು ಎಂದ ಕೂಡಲೇ ಎಲ್ಲ ಉಪಾಧ್ಯಾಯರೂ ಹುಡುಗರೂ ಬಂದು ನನ್ನ ಬಟ್ಟೆಗಳನ್ನು ಮುಟ್ಟಿನೋಡಿದರು. ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಸೇರಿದೆ' ....

ಎ) ಸಾಮಾನ್ಯವಾಕ್ಯ ಬಿ)ಸಂಯೋಜಿತ ವಾಕ್ಯ ಸಿ)ಮಿಶ್ರವಾಕ್ಯ ಡಿ)ಸರಳ ವಾಕ್ಯ

೩೯. 'ಮಂಡಲಗಿಂಡಲ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ----

ಎ) ಜೋಡುನುಡಿ ಬಿ)ಅನುಕರಣಾವ್ಯಯ ಸಿ)ನುಡಿಗಟ್ಟು ಡಿ)ದ್ವಿರುಕ್ತಿ

೪೦. 'ನೆತ್ತಿಯೊಳ್' ಪದದಲ್ಲಿರುವ ವಿಭಕ್ತಿಯಿದು ------

ಎ) ಪ್ರಥಮಾ ಬಿ)ತೃತೀಯಾ ಸಿ)ಸಪ್ತಮಿ ಡಿ)ಷಷ್ಠಿ

೪೧. ಬಂಬಲ ಪದದ ಅರ್ಥ ----

ಎ) ಬೆಲೆ ಬಿ)ಗುಂಪು ಸಿ)ಬಿಂಬಲ ಡಿ)ಬಲ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.೪*೧=೪

೪೨. ಅಮೃತ : ಅಮರ್ದು : : ಬ್ರಹ್ಮ : -----

೪೩. ತಗೊಂಡು : ತೆಗೆದುಕೊಂಡು : : ಮಾಡ್ಯಾರೊ : ___

೪೪. ಕನ್ನಡಿಗ : ತದ್ಧಿತಾಂತ ನಾಮ : : ಕನ್ನಡತನ : ----

೪೫. ಬಂದೀತು : ಸಂಭಾವನಾರ್ಥಕ : : ಬರದು : ------

೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

ಅಥವಾ

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩

'ಹಸುಳೆಯಂದದಿ ಒಲಿದಳು '

ಅಥವಾ

'ಕೇಳಿ ದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆ ನಿಂತ ಸಾಧನೆ -ತಪಸ್ಸು, ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ '

ಭಾಗ -'ಸಿ'

ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.
೧*೩=೩

೧.ಅತಿ ಆಸೆ ಗತಿ ಕೇಡು

೨.ಅಲ್ಪರ ಸಂಗ ;ಅಭಿಮಾನ ಭಂಗ

೩.ಆಳಾಗಿ ದುಡಿ;ಅರಸನಾಗಿ ಉಣ್ಣು

೪೯. ನಿಮ್ಮನ್ನು ಉಡುಪಿಯ ಸುಹಾಸ್ /ಸುಭಾಷಿಣಿ ಎಂದು ಭಾವಿಸಿ ,ನಿಮ್ಮ ಮುಂದಿನ ವರ್ಷದ ವಿದ್ಯಾಭ್ಯಾಸದ ಯೋಜನೆಯನ್ನು ಕುರಿತು ಶಿವಮೊಗ್ಗದಲ್ಲಿರುವ ಪ್ರಣೀತ್/ಪ್ರಣತಿ ಗೆ ಒಂದು ಪತ್ರ ಬರೆಯಿರಿ                     ೧*೫ =೫

ಅಥವಾ

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಮಲ್ಲಾಪುರ ದಲ್ಲಿ ಓದುತ್ತಿರುವ ಕೃಷ್ /ಕೃತಿ ಎಂದು ಭಾವಿಸಿ , ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪ್ರಮಾಣ ಪತ್ರ ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯಿರಿ

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

* ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರೋಪಾಯಗಳು
* ಜನಸಂಖ್ಯಾ ಸಮಸ್ಯೆ ಮತ್ತು ನಿವಾರಣೆ
*ಮಹಿಳೆಯರ ಮೇಲಿನ ಶೋಷಣೆ